**73211** **MA-780**

Sl.No.

Total No. of Pages : 3

# ಮೂರನೆಯ ಚತುರ್ಮಾಸ ಬಿ.ಎಸ್ಸಿ/ಬಿ.ಎಸ್ಸಿ.(ಕುಟುಂಬ & ಸಾಮುದಾಯಿಕ ವಿಜ್ಞಾನ) ಬಿ.ಸಿ.ಎ.(ಗಣಕ ಜ್ಞಾನ) ಪರೀಕ್ಷೆ, ಮಾರ್ಚ್/ಏಪ್ರಿಲ್ 2022

**(ಚತುರ್ಮಾಸ ಸ್ಕೀಮ್ : ಸಿಬಿಸಿಎಸ್)**

**(2019-20 ಮತ್ತು 2020-21 ನೇ ಸಾಲಿನ ವಿದ್ಯಾರ್ಥಿಗಳಿಗೆ)**

**ಕನ್ನಡ ಭಾಷೆ (ಪತ್ರಿಕೆ-೨)**

**ವಿಜ್ಞಾನ ಗಂಗೋತ್ರಿ : ೨ ಕಾವ್ಯಭಾಗ-೧ ಮತ್ತು ಕಥನ ಭಾಗ**

**ಸಮಯ: 3 ಗಂಟೆಗಳು** **ಗರಿಷ್ಠ ಅಂಕಗಳು : 80**

## ಕಾವ್ಯ ಭಾಗ-೧ (50 ಅಂಕಗಳು)

*ಪ್ರ1)* ಅ) ಒಂದು ಪದ್ಯಭಾಗದ ಭಾವವನ್ನು ಸಂದರ್ಭಸಹಿತ ವಿವರಿಸಿ: [5]

೧) ಹಾಲು ಬತ್ತಿದ ಹಸುವಿಂಗೆ ಕರುವ ಬಿಟ್ಟಡೆ
ಒದೆವುದಲ್ಲದೆ ಊಣಲೀಸುವುದೆ?
ಅರಿವು ನಷ್ಟವಾದವ ಕ್ರೀಯ ಬಲ್ಲನೆ?
ಕ್ರೀಯೆಂಬುದೆ ಹಸು ಅರಿವೆಂಬುದೆ ಹಾಲು
ಬಯಕೆ ಎಂಬುದೆ ಕರು
ಇಂತೀ ತ್ರಿವಿಧವನರಿದಲ್ಲಿ
ಸದಾಶಿವಮೂರ್ತಿ ಲಿಂಗವು ತಾನೆ.

೨) ಆ ಕೊಳದ ತೀರದಲಿ ತರುಗಳು
ನೇಕವದರೊಳಗೊಂದು ಠಾವಿನೊ
ಳೇಕವೃಕ್ಷದ ನೆಳಲಿನಲಿ ನವಕುಸುಮದಿಕ್ಕೆಯಲ್ಲಿ
ಆ ಕಮಲಜನ ತುರಗ ನಿದ್ರಾ
ವ್ಯಾಕುಲದಿ ಮಲಗಿರಲು ಕಂಡ ಶು
ಭಾಕರೋನ್ನತ ಶುಭ್ರತೇಜದ ರಾಜಹಂಸವನು

*P.T.O.*

https://www.uomonline.com

ಆ) ಒಂದು ವಾಕ್ಯದಲ್ಲಿ ಉತ್ತರಿಸಿ: [5×1=5]

೧) ಮೋಳಿಗೆ ಮಹಾದೇವಿಯ ಅಂಕಿತನಾಮವೇನು?

೨) ಬಸವಣ್ಣನಿಗೆ ಅಭೋಜ್ಯ ವಸ್ತು ಯಾವುದು?

೩) ಕನಕದಾಸರ ಮೂಲ ಹೆಸರೇನು?

೪) ರಾಮನಾಥ ಚರಿತೆ ಕೃತಿಯ ಕರ್ತೃ ಯಾರು?

೫) ಭಕ್ತೆ ಮಳೆಗಾಗಿ ಯಾರಲ್ಲಿ ಮೊರೆ ಹೋಗಿದ್ದಾಳೆ?

ಪ್ರ2) ಮೂರು ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ: [3×4=12]

೧) ಸ್ವಾಮಿ ಬಾಯಲ್ಲಿ ಬೆಲ್ಲ ಎದೆಯಲ್ಲಿ ಕತ್ತರಿ.

೨) ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ.

೩) ಎಸೆವ ಕಾರಂ ಬಯಸಿ ನಿಂದ ಚಾದಗೆಯಂತೆ.

೪) ನಿನಗಿದು ತರವೆ ಬಿಡುಪರಹಿಂಸೆ ದೋಷವಿದೆಂದುದಾ ಪಕ್ಷಿ:

೫) ಪುಟ್ಟಿಹುದಲ್ಲದಾ ನಾಡೊಳದನು ಬ್ಬಾಯಬಿಟ್ಟು ನುಡಿವರಲ್ಲಿಲ್ಲ.

ಪ್ರ3) ಅ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ: [2×2=4]

ಹೆಳವನಕಟ್ಟೆ ಗಿರಿಯಮ್ಮ, ಕಿನ್ನರ ಬೊಮ್ಮಯ್ಯ

ಕನಕದಾಸ, ಉರಿಲಿಂಗ ಪೆದ್ದಿ.

ಆ) ಒಂದು ವಿಷಯ ಕುರಿತು ಸ್ವಂತ ಅಭಿಪ್ರಾಯವನ್ನು ಬರೆಯಿರಿ. [1×4=4]

೧) ಜಲ ಸಂರಕ್ಷಣೆ

೨) ನೈಜ ಭಕ್ತಿ ಮತ್ತು ಡಾಂಭಿಕ ಭಕ್ತಿ

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ. [10]

೧) ಶಿವಶರಣರ ಸಂಗದಿಂದಾಗುವ ಲಾಭ ಹಾಗೂ ಸಮಚಿತ್ತತೆಯ ಕುರಿತು ಅಕ್ಕಮಹಾದೇವಿಯ ನಿಲುವುಗಳೇನು?

೨) ಕೈಸದರದವರನು ಕೊಲುವುದೇನ್ ಕಾವ್ಯಭಾಗದಲ್ಲಿ ವ್ಯಕ್ತವಾಗಿರುವ ಅಹಿಂಸೆಯ ತತ್ವವನ್ನು ವಿವರಿಸಿ.

https://www.uomonline.com

ಪ್ರ5) ಎರಡು ಪ್ರಶ್ನೆಗಳಿಗೆ ಉತ್ತರಿಸಿ: [2×5=10]

೧) ಕ್ರಿಯಾಜ್ಞಾನವನ್ನೂ ಮೀರಿ ಮೇಲೇರಿನಿಂತ ಲಿಂಗಾನುಭವ ಶರಣನ ಚಿತ್ರಣ ಅರಿವಿನ ಮಾರಿತಂದೆ ವಚನದಲ್ಲಿ ಹೇಗೆ ವ್ಯಕ್ತವಾಗಿದೆ?

೨) ಕಿನ್ನರಯ್ಯನ ಉಳ್ಳಿಪ್ರಸಂಗವನ್ನು ವಿವರಿಸಿ.

೩) ನಂಜುಂಡ ಕವಿಯು ಕನ್ನಡ ನಾಡನ್ನು ಹೇಗೆ ವರ್ಣಿಸಿದ್ದಾನೆ ವಿವರಿಸಿ.

೪) ಜ್ಞಾನವನ್ನು ಪಡೆಯುವ ಸರಳ ಮಾರ್ಗದ ಬಗ್ಗೆ ಮಹಿಪತಿದಾಸರ ನಿಲುವುಗಳೇನು? ವಿವರಿಸಿ.

**ಕಥನ ಭಾಗ – (30 ಅಂಕಗಳು)**

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) 'ಚಿಗುರೊಡೆಯುತ್ತಿರುವ ಗಿಡದ ತನ್ಮಯತೆ' ಒಂದು ಅಪೂರ್ವ ಪರಿಸರ ಕಥನ ಹೇಗೆ ವಿವರಿಸಿ.

೨) ವಿಕಲಚೇತನ ಮಗುವನ್ನು ಸಾಮಾನ್ಯ ಚೇತನವಾಗಿಸುವಲ್ಲಿ ತಾಯಿಯ ಪ್ರಯತ್ನವೇನು ವಿವರಿಸಿ.

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ. [10]

೧) ಕಡಲಗರ್ಭದ ಅಪರಂಪಾರ ಒಂದು ಅಪರೂಪದ ಪ್ರವಾಸ ಕಥನ ಹೇಗೆ ವಿವರಿಸಿ.

೨) 'ಬಾಲ್ಯದ ನೆನಪುಗಳ ಆಗರ – ಸಂತೆ' ನಾನ್ಯಾರಿಗಲ್ಲದವಳು ಪ್ರಬಂಧದ ಹಿನ್ನೆಲೆಯಲ್ಲಿ ವಿವರಿಸಿ.

ಪ್ರ8) ಎರಡನ್ನು ಕುರಿತು ಸಂಕ್ಷಿಪ್ತವಾಗಿ ಉತ್ತರಿಸಿ. [2×5=10]

೧) ಸಾಮ್ರಾಜ್ಯಶಾಹಿ ಶಕ್ತಿಗಳ ನಿರ್ದಯತೆಯನ್ನು ಕ್ಷೀರಸಾಗರ ಅವರು ಹೇಗೆ ಚಿತ್ರಿಸಿದ್ದಾರೆ?

೨) ದೀಪಾಳು ತನ್ನ ಮಗುವಿನ ಕಲಿಕೆಗೆ ಬಳಸಿದ ತಂತ್ರಗಳು.

೩) 'ರಾಮರಾವಣರ ಯುದ್ಧ' ಪ್ರಬಂಧದ ಸ್ವಾರಸ್ಯವೇನು?

೪) ಕಡಲು ಕಡಲಮ್ಮನ ಮಾಯಾಗರ್ಭ ವಿವರಿಸಿ.

https://www.uomonline.com